# ಉಪ ತಹಶೀಲ್ದಾರರ ನ್ಯಾಯಾಲಯ, ಹಂಪಸಾಗರ-583214

OFFICE OF THE DEPUTY TAHASILDAR, HAMPASAGARA-583214

ಎ.ವಿಲೇ.ನಂ.ಕಂ.ಪಹಣಿ.ವಿವಾದ/33/2014-15 ದಿನಾಂಕ:೩೮ .07.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ಹಂಪಸಾಗರ

**ವಾದಿ (ಶ್ರೀ/ಶ್ರೀಮತಿ)**

ಕಮಲಮ್ಮ ತಾಯಿ ಲೇಟ್ ಮುದುಗಣ್ಣನವರ ಗಿಡ್ಡವ್ವ ಏಣಿಗಿ ಗ್ರಾಮ ಹಬೊ ಹಳ್ಳಿ ತಾಲೂಕು

**ಪ್ರತಿವಾದಿ (ಶ್ರೀ/ಶ್ರೀಮತಿ)**

1. ಹೆಚ್ ಕರೆಮರಿಯಪ್ಪ ತಂದೆ ಮುದುಗಣ್ಣನವರ ಗಿಡ್ಡವ್ವ
2. ಹೆಚ್ ಉಮೇಶ ತಂದೆ ಬಸಪ್ಪ
ಏಣಿಗಿ ಗ್ರಾಮ ಹಬೊ ಹಳ್ಳಿ ತಾಲೂಕು

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಏಣ್ಗಿ | 239/ಬಿ1ಎಫ್2ಎಫ್ | 4.00 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಏಣ್ಗಿ ಗ್ರಾಮದ ಸ.ನಂ. 239/ಬಿ1ಎಫ್2ಎಫ್ ವಿಸ್ತೀರ್ಣ 4.00 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪಾಲು ವಿಭಾಗದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್9/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ: 17.09.2014 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಮುದುಗಣ್ಣನವರ ಗಿಡ್ಡವ್ವ ತಂದೆ ದುರುಗಪ್ಪ ಇವರ ಜಮೀನಾಗಿದ್ದು ಇವರು ಲೇಸಿಯಾಗಿದ್ದು ಸದರಿಯವರು ದಿನಾಂಕ:20.04.2010 ರಂದು ಮರಣ ಹೊಂದಿರುತ್ತಾರೆ ಸದರಿಯವರಿಗೆ 1. ಕಮಲಮ್ಮ 2. ದೊಡ್ಡಮರಿಯಪ್ಪ 3. ಸಣ್ಣ ಮರಿಯಪ್ಪ 4. ಶಾರದಮ್ಮ ಎಂಬ ನಾಲ್ಕುಜನ ಮಕ್ಕಳಿದ್ದು ದಿನಾಂಕ:11.07.2014 ರಂದು ಈ ಎಲ್ಲರೂ ಒಪ್ಪಿಗೆ ಮಾಡಿಕೊಂಡಿರುವ ಒಪ್ಪಿಗೆ ಪ್ರಮಾಣ ಪತ್ರದ ಪ್ರಕಾರ ವಾದಿಗಳಾದ ಕಮಲಮ್ಮ ತಾಯಿ ಮುದುಗಣ್ಣನವರ ಗಿಡ್ಡವ್ವ ಇವರ ಹೆಸರಿಗೆ ಪೋತಿ ವಾರಸ ಪ್ರಕಾರ ಖಾತೆ ಮಾಡಿಕೊಡುವಂತೆ ಒಪ್ಪಿ ಸಹಿ ಮಾಡಿರುವ ಪ್ರಕಾರ ಕಂದಾಯ ಲೆಕ್ಕ ದಾಖಲೆಯಲ್ಲಿ ಖಾತೆ ಬದಲಾವಣೆ ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

1 ಮತ್ತು 2ನೇ ಪ್ರತಿವಾದಿಗಳು ಕ್ರಮವಾಗಿ ದಿನಾಂಕ:30.07.2014 ಮತ್ತು ದಿನಾಂಕ:24.07.2014 ರಂದು ಲಿಖಿತ ತಕರಾರನ್ನು ಸಲ್ಲಿಸಿದ್ದು ಸದರಿಯವರ ಪ್ರಕಾರ ವ್ಯಾಜ್ಯದ ಜಮೀನಿನ ಪೈಕಿ ವಿಸ್ತೀರ್ಣ 1.00 ಎಕರೆ ಜಮೀನು ಪ್ರತಿವಾದಿಗಳಾದ ತಮಗೆ ಸೇರಿದ್ದು ಪ್ರಸ್ತುತ ಹಕ್ಕುಬದಲಾವಣೆಗೆ ತಮ್ಮ ಒಪ್ಪಿಗೆ ಇಲ್ಲವೆಂದು ಸೂಚಿಸುತ್ತಾ ಸದರಿ ವಾದಿಗಳು ಸಲ್ಲಿಸಿದ ಮನವಿಯನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ

ವಿಚಾರಣೆಗೆ ವಾದಿ ಪ್ರತಿವಾದಿಗಳು ಸತತವಾಗಿ ಗೈರು ಹಾಜರಾಗಿದ್ದು ಅವಶ್ಯ ದಾಖಲೆಗಳನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಕಾರಣ ಕಡತದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇರೆಗೆ ಆದೇಶಿಸಲು ತೀರ್ಮಾನಿಸಲಾಯಿತು.

1. ವ್ಯಾಜ್ಯದ ಜಮೀನಿನ ಹಾಲಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಮುದುಗಣ್ಣನವರ ಗಿಡ್ಡವ್ವ ತಂದೆ ದುರುಗಪ್ಪ ಇವರು ಪಟ್ಟಾದಾರರಾಗಿರುವುದು ಕಂಡುಬಂದಿರುತ್ತದೆ..
2. ವಾದಿಗಳು ಸಲ್ಲಿಸಿದ ಮರಣ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಮೃತರ ಹೆಸರು ಹರಿಜನ ಗಿಡ್ಡಮ್ಮ (ಲೇಸಿ) ಎಂದೂ ಹಾಗೂ ಸದರಿಯವರ ದಿನಾಂಕ:20.04.2010 ರಂದು ಮರಣ ಹೊಂದಿರುವುದಾಗಿ ಕಂಡುಬಂದಿರುತ್ತದೆ. ಆದರೆ ಸದರಿ ಮರಣ ಪ್ರಮಾಣ ಪತ್ರದಲ್ಲಿನ ಹೆಸರಿಗೂ ಹಾಗೂ ವ್ಯಾಜ್ಯದ ಜಮೀನಿನ ಪಟ್ಟಾದಾರರ ಹೆಸರಿಗೂ ವ್ಯತ್ಯಾಸವಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವಾದಿ ಪ್ರತಿವಾದಿಗಳ ಸತತ ಗೈರು ಹಾಜರಾತಿಯಿಂದಾಗಿ ಹಾಗೂ ವಾದಿಗಳು ತಮ್ಮ ಮನವಿಯೊಂದಿಗೆ ಸಲ್ಲಿಸಿದ ಒಪ್ಪಿಗೆ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಸದರಿ ಪತ್ರವು ನೊಂದಾಯಿತವಾಗಿಲ್ಲದ ಕಾರಣ ಸದರಿ ಒಪ್ಪಿಗೆ ಪತ್ರದ ನೈಜತೆಯನ್ನು ತೀರ್ಮಾನಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಇರುವುದಿಲ್ಲವಾದ್ದರಿಂದ ಮತ್ತು ವ್ಯಾಜ್ಯದ ಜಮೀನಿನ ಪಟ್ಟಾದಾರರ ಹೆಸರಿಗೂ, ಮೃತರ ಮರಣ ಪ್ರಮಾಣ ಪತ್ರದಲ್ಲಿನ ಹೆಸರಿಗೂ ವ್ಯತ್ಯಾಸ ಕಂಡುಬಂದಿರುವುದರಿಂದ ಉಭಯ ಪಕ್ಷಗಳಿಗೆ ಉನ್ನತ ನ್ಯಾಯಾಲಯದಲ್ಲಿ ಪರಿಹಾರಕಂಡುಕೊಳ್ಳುವಂತೆ ಸೂಚಿಸಿ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ.

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಏಣ್ಗಿ ಗ್ರಾಮದ ಸ.ನಂ. 239/ಬಿ1ಎಫ್2ಎಫ್ ವಿಸ್ತೀರ್ಣ 4.00 ಎಕರೆ ವಿವಾದಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಭಯರು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸುತ್ತಾ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ:28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

O/C

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ಹಂಪಸಾಗರ.

ಉಪ ತಹಶೀಲ್ದಾರರು,
ಹಂಪಸಾಗರ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೇದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

04/8/16
DESPATCHED

8/8/16